2) ಶ್ರೀ ಪಿ.ಹನುಮಂತಪ್ಪ
ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ.

3) ಶ್ರೀ ಜಾಫರ್ ಮೊಯಿನುದ್ದೀನ್,
ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ.

ಶ್ರೀ ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 13(489)

**ಸದಸ್ಯರ ಹೆಸರು: ಶ್ರೀ ಆಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ)**

**ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)**

## ಪ್ರಶ್ನೆ

ಅ. ಶ್ರೀ ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸಿನ ಸಾರಾಂಶವೇನು? (ವಿವರಗಳನ್ನು ನೀಡುವುದು)

ಆ. ಶಿಫಾರಸ್ಸಿನನ್ವಯ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ನೌಕರುಗಳನ್ನು ಕೈಬಿಡಲು ಉದ್ದೇಶಿಸಲಾಗಿದೆ?

## ಉತ್ತರ

ಅ. ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯನ್ನು ಜನವರಿ 2001ರಲ್ಲಿ ನೀಡಿದೆ. ಇದರಲ್ಲಿ ಆಯೋಗವು ಸಚಿವಾಲಯದ ಸುಧಾರಣೆ, ಜಿಲ್ಲಾ ಆಡಳಿತ ಸುಧಾರಣೆ ಮತ್ತು ಉತ್ತಮ ಆಡಳಿತ ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ. ತನ್ನ ಅಂತಿಮ ವರದಿಯನ್ನು 27.12.2001ರಂದು ನೀಡಿದ್ದು ಅದರಲ್ಲಿ ಈ ಕೆಳಗಿನ ವಿಷಯಗಳು ಇರುತ್ತವೆ.

1. ಸರಿಗಾತ್ರದ ಕ್ರಮಗಳು

2. ಆರ್ಥಿಕ ಮಿತವ್ಯಯದ ಕ್ರಮಗಳು

3. ಆಡಳಿತಾತ್ಮಕ ಕ್ರಮಗಳು

4. ವೃತ್ತಿಯ ಆಯ್ಕೆಯ ಅವಕಾಶಗಳು

5. ಇ-ಆಡಳಿತ

6. ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳು

7. ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು.

8. ಬೇರೆಯವರಿಗೆ ವಹಿಸುವ ಕ್ಷೇತ್ರಗಳು.

ಆ. ಆಡಳಿತ ಸುಧಾರಣಾ ಆಯೋಗದ ಅಂತಿಮ ವರದಿಯು ಡಿಸೆಂಬರ್ 2001ರಲ್ಲಿ ಸ್ವೀಕೃತವಾಗಿದೆ. ಸಿಬ್ಬಂದಿಯನ್ನು ಕಡಿತಗೊಳಿಸುವ ಬಗ್ಗೆ ಈ ತನಕ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಕರ್ನಾಟಕ ಲೋಕಸೇವಾ ಆಯೋಗದ ವಿಭಾಗೀಯ ಕಛೇರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 14(494)

**ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮವರ)**

**ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)**

## ಉತ್ತರ

ಅ) ಕರ್ನಾಟಕ ಲೋಕಸೇವಾ ಆಯೋಗದ ವಿಭಾಗೀಯ ಕಛೇರಿಗಳಲ್ಲಿ ಸಿಬ್ಬಂದಿಗನುಗುಣವಾಗಿ ಕೆಲಸಕಾರ್ಯಗಳು ಇವೆಯೆ?

ಇಲ್ಲವಾದಲ್ಲಿ ಅವುಗಳನ್ನು ಮುಂದುವರಿಸುವ ಬಗ್ಗೆ ಸರ್ಕಾರದ ನಿಲುವುಗಳೇನು?

ಆ) ಅನಾವಶ್ಯಕ ಕಛೇರಿಗಳು ಹಾಗೂ ಸಿಬ್ಬಂದಿವರ್ಗ ಎಂದು ಆಡಳಿತ ಸುಧಾರಣಾ ಆಯೋಗದವರು ಶಿಫಾರಸ್ಸು ಮಾಡಿದ ಮೇರೆಗೆ ಅಂಥವುಗಳನ್ನು ರದ್ದುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?